# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1111** |
| **ಸದಸ್ಯರ ಹೆಸರು** | : | **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **18.12.2024** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ</td>
<td>ರಾಜ್ಯದಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಇರುವ ಒಟ್ಟು ಪ್ರಾಥಮಿಕ ಹಾಗೂ ಇತರ ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಚಿಕಿತ್ಸಾ ಕೇಂದ್ರಗಳಿಗೆ ಖಾಯಂ ಆಗಿ ಕೆಲಸ ನಿರ್ವಹಿಸುವ ಪಶು ವೈದ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು? ಖಾಲಿ ಇರುವ ವೈದ್ಯಾಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಲು ಯಾವಾಗ ಕ್ರಮ ವಹಿಸಲಾಗುವುದು.</td>
<td>
ರಾಜ್ಯದ ಪಶುಸಂಗೋಪನಾ ಇಲಾಖೆಯಲ್ಲಿ ಒಟ್ಟು 4252 ಪಶು ವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ.ಸಂ.</th><th>ಸಂಸ್ಥೆಯ ವಿವರ</th><th>ಸಂಖ್ಯೆ</th></tr>
<tr><td>1</td><td>ಸೂಪರ್ ಸ್ಪೆಷಾಲಿಟಿ/ ಸ್ಪೆಷಾಲಿಟಿ</td><td>5</td></tr>
<tr><td>2</td><td>ಪಾಲಿ ಕ್ಲಿನಿಕ್</td><td>27</td></tr>
<tr><td>3</td><td>ಪಶು ಆಸ್ಪತ್ರೆ</td><td>663</td></tr>
<tr><td>4</td><td>ಪಶು ಚಿಕಿತ್ಸಾಲಯ</td><td>2176</td></tr>
<tr><td>5</td><td>ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ</td><td>1205</td></tr>
<tr><td>6</td><td>ಸಂಚಾರಿ ಪಶು ಚಿಕಿತ್ಸಾಲಯ</td><td>176</td></tr>
<tr><td></td><td>ಒಟ್ಟು</td><td>4252</td></tr>
</table>
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿನ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
<table>
<tr><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>18563</td><td>8672</td><td>9891</td></tr>
</table>
ಇಲಾಖೆಯಲ್ಲಿ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅರ್ಜಿ ಸಲ್ಲಿಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. ನೇಮಕಾತಿ ಪ್ರಕ್ರಿಯೆ ವಿಳಂಬವಾಗುವ ಸಂಭವವಿರುವುದರಿಂದ ಪ್ರಸ್ತುತ 373 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಆದೇಶ ನೀಡಲಾಗಿರುತ್ತದೆ. ಹಾಗೂ ಹಾಜರಾಗದೇ ಬಾಕಿ ಉಳಿದಿರುವ ಹುದ್ದೆಗಳಿಗೆ ಮತ್ತೊಮ್ಮೆ 138 ಅಭ್ಯರ್ಥಿಗಳಿಗೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ಆದೇಶ ನೀಡಲಾಗಿದೆ. ಅದರಂತೆ, 264 ಪಶುವೈದ್ಯಾಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.<br><br>
ಮುಂಬಡ್ತಿ ಹುದ್ದೆಗಳಾದ ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳಿಂದ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ, ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಜಾನುವಾರು ಅಧಿಕಾರಿ ಹುದ್ದೆಗೆ ಹಾಗೂ ಜಾನುವಾರು ಅಧಿಕಾರಿ ಹುದ್ದೆಯಿಂದ ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ.<br><br>
ಇಲಾಖೆಯಲ್ಲಿ ಖಾಲಿ ಇರುವ 5574 ಡಿ ದರ್ಜೆ ಹುದ್ದೆಗಳಿಗೆದುರಾಗಿ ಈಗಾಗಲೇ 2301 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಭರ್ತಿ ಮಾಡಲಾಗಿದೆ.
</td>
</tr>
</table>

| | | |
|---|---|---|
| | | ಇಲಾಖೆಯಲ್ಲಿ ಖಾಲಿಯಿರುವ ಡಿ ದರ್ಜೆ ಹುದ್ದೆಗಳ ಪೈಕಿ 700 ಡಿ ದರ್ಜೆ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಭರ್ತಿ ಮಾಡಿಕೊಳ್ಳುವ ಕುರಿತು ಪರಿಶೀಲನೆಯಲ್ಲಿರುತ್ತದೆ. |
| ಆ | ಕೆಲವು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಗುತ್ತಿಗೆ ಆಧಾರಿತ ವೈದ್ಯಾಧಿಕಾರಿಗಳನ್ನು ನೇಮಿಸಿದ್ದು ಎಷ್ಟು ಜನರು ಸೇವೆಗೆ ಹಾಜರಾಗಿರುತ್ತಾರೆ. ಉಳಿದ ಖಾಲಿ ಹುದ್ದೆಗಳಿಗೆ ಯಾವಾಗ ನೇಮಕಾತಿ ಮಾಡಲಾಗುವುದು. | 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳು ಕ್ರಮವಹಿಸಲಾಗಿದೆ. ಈಗಾಗಲೇ 373 ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ ಹಾಗೂ 138 ಅಭ್ಯರ್ಥಿಗಳಿಗೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ಆದೇಶ ನೀಡಲಾಗಿದೆ. ಅದರಂತೆ, 264 ಪಶುವೈದ್ಯಾಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಉಳಿದ ಪಶುವೈದ್ಯಾಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗುತ್ತಿದ್ದು ಉಳಿದ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲಾಗುವುದು. |
| ಇ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೆಲವು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಕೆಲಸ ಮಾಡಲು 'ಡಿ' ಗುಂಪಿನ ಸಿಬ್ಬಂದಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಕುರಿತು ಇಲಾಖೆಯಿಂದ ಯಾವ ಕ್ರಮವಹಿಸಲಾಗುತ್ತಿದೆ. | ಬಂದಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ ಪಶುವೈದ್ಯ ಸಂಸ್ಥೆಗಳಲ್ಲಿ ಖಾಲಿ ಇರುವ 166 "ಡಿ" ದರ್ಜೆ ಹುದ್ದೆಗಳಿಗೆದುರಾಗಿ 81 'ಡಿ' ದರ್ಜೆ ಹುದ್ದೆಗಳಿಗೆ ಹೊರಸಂಪನ್ಮೂಲ ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲಾಗಿದೆ.<br><br>ಉಡುಪಿ ಜಿಲ್ಲೆಯ ಪಶುವೈದ್ಯ ಸಂಸ್ಥೆಗಳಲ್ಲಿ ಖಾಲಿ ಇರುವ 139 "ಡಿ" ದರ್ಜೆ ಹುದ್ದೆಗಳಿಗೆದುರಾಗಿ 59 'ಡಿ'ದರ್ಜೆ ನೌಕರರನ್ನು ಹೊರಸಂಪನ್ಮೂಲ ಸಂಸ್ಥೆಗಳಿಂದ ಸೇವೆಯನ್ನು ಪಡೆಯಲಾಗಿದೆ.<br><br>ಇಲಾಖೆಯಲ್ಲಿ ಖಾಲಿಯಿರುವ ಡಿ ದರ್ಜೆ ಹುದ್ದೆಗಳ ಪೈಕಿ 700 ಡಿ ದರ್ಜೆ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಭರ್ತಿ ಮಾಡಿಕೊಳ್ಳುವ ಕುರಿತು ಪರಿಶೀಲನೆಯಲ್ಲಿರುತ್ತದೆ. |
| ಈ | ಪಶು ಸಂಗೋಪನೆ ಇಲಾಖೆಯ ಕೆಲವು ವೈದ್ಯಾಧಿಕಾರಿ ಮತ್ತು ಸಿಬ್ಬಂದಿಗಳು ಇತರೆ ಇಲಾಖೆಗಳಲ್ಲಿ ನಿಯೋಜನೆಯಲ್ಲಿ ಇರುವವರ ಸಂಖ್ಯೆ ಎಷ್ಟು? ಅವರನ್ನು ಮಾತೃ ಇಲಾಖೆಗೆ ಕರೆಸಿಕೊಳ್ಳಲು ಕ್ರಮವಹಿಸಿಕೊಳ್ಳಲಾಗಿದೆಯೇ? ಯಾವಾಗ ಈ ಕುರಿತು ಕ್ರಮ ಜರುಗಿಸಲಾಗುವುದು? | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಒಬ್ಬ ಜಾನುವಾರು ಅಧಿಕಾರಿಯವರು ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ, ಧಾರವಾಡದಲ್ಲಿ, ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಅಧಿಕಾರಿಯವರನ್ನು ಮಾತೃ ಇಲಾಖೆಗೆ ಹಿಂಪಡೆಯಲು ಈಗಾಗಲೇ ಪತ್ರ ಬರೆಯಲಾಗಿದೆ. |

**ಸಂಖ್ಯೆ:ಪಸಮೀ ಇ-252 ಪಸಸೇ 2024**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

# ಅನುಬಂಧ

| ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಹುದ್ದೆಗಳ ವಿವರ | | | | | |
|---|---|---|---|---|---|
| ಎ-ಗುಂಪು | | | | | |
| ಕ್ರ. ಸಂ. | ಪದನಾಮ | ಮಂಜೂರು | ಭರ್ತಿ | ಖಾಲಿ | ಷರಾ |
| 1 | ಆಯುಕ್ತರು | 1 | 1 | 0 | |
| 2 | ನಿರ್ದೇಶಕರು | 1 | 1 | 0 | |
| 3 | ಅಪರ ನಿರ್ದೇಶಕರು | 5 | 5 | 0 | |
| 4 | ಜಂಟಿ ನಿರ್ದೇಶಕರು | 9 | 5 | 4 | |
| 5 | ಜಂಟಿ ನಿರ್ದೇಶಕರು (ಆಡಳಿತ) | 1 | 0 | 1 | |
| 6 | ಜಂಟಿ ನಿರ್ದೇಶಕರು (ಅಂಕಿ-ಅಂಶ) | 1 | 1 | 0 | |
| 7 | ಉಪ ನಿಯಂತ್ರಕರು (ಹಣಕಾಸು) | 1 | 1 | 0 | |
| 8 | ಉಪ ನಿರ್ದೇಶಕರು (ಅಂಕಿ-ಅಂಶ) | 2 | 2 | 0 | |
| 9 | ಉಪ ನಿರ್ದೇಶಕರು | 60 | 56 | 4 | |
| 10 | ಉಪ ನಿರ್ದೇಶಕರು (ಪಾಲಿಕ್ಲಿನಿಕ್) | 30 | 23 | 7 | |
| 11 | ಕೇಂದ್ರ ಸ್ಥಾನಿಕ ಸಹಾಯಕರು | 1 | 1 | 0 | |
| 12 | ಸಹಾಯಕ ನಿರ್ದೇಶಕರು (ಕೃಷಿ) | 1 | 0 | 1 | |
| | **ಒಟ್ಟು:** | **113** | **96** | **17** | |
| ಎ-ಗುಂಪು **Flexible Posts.** (ಬಿ) | | | | | |
| 13 | ಮುಖ್ಯ ಪಶುವೈದ್ಯಾಧಿಕಾರಿ | **509** **Flexible** | **1124** | - | Note: Cadre strength of Serial No. 13 to 19 is Flexible. It varies depending on promotion to different cadres on full filling required eligilibility criteria or on vacating the post on account of retirement, Promotion etc. **715 ಮುಖ್ಯ ಪಶುವೈದ್ಯಾಧಿಕಾರಿಗಳ ಹುದ್ದೆಗಳ ಎದುರಾಗಿ 1124 ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಹೆಚ್ಚುವರಿಯಾಗಿ 340 ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.** |
| 14 | ಸಹಾಯಕ ನಿರ್ದೇಶಕರು | **176** **Flexible** | | | |
| 15 | ಮುಖ್ಯ ಪಶುವೈದ್ಯಾಧಿಕಾರಿ (ವಿಷಯ ತಜ್ಞರು) | **30** **Flexible** | | | |
| 16 | ಹಿರಿಯ ಪಶುವೈದ್ಯಾಧಿಕಾರಿ | 970 Flexible | 482 | 488 | |
| 17 | ಹಿರಿಯ ಪಶುವೈದ್ಯಾಧಿಕಾರಿ (ವಿಷಯ ತಜ್ಞರು) | 30 Flexible | 8 | 22 | |
| 18 | ಪಶುವೈದ್ಯಾಧಿಕಾರಿ | 1572 | 559 | 1013 | |
| 19 | ಪಶುವೈದ್ಯಾಧಿಕಾರಿ (ವಿಷಯ ತಜ್ಞರು) | 30 Flexible | 0 | 30 | |
| | ಒಟ್ಟು | **3317** | **2173** | **1553** **-409** **...........** **1144** | ಖಾಲಿ ಇರುವ 1297 ಹುದ್ದೆಗಳಲ್ಲಿ 409 ಹುದ್ದೆಗಳನ್ನು ಮುಖ್ಯ ಪಶುವೈದ್ಯಾಧಿಕಾರಿ ಹುದ್ದೆಯಲ್ಲಿ Flexible Posts. ಎಂದು ಪರಿಗಣಿಸಬಹುದಾಗಿದೆ. |
| | ಒಟ್ಟು ಎ+ಬಿ | **3430** | **2269** | **1161** | |
| ಬಿ-ಗುಂಪು | | | | | |
| 20 | ಸಹಾಯಕ ನಿರ್ದೇಶಕರು(ಸಾಂಖ್ಯಿಕ)/ ಫೀಲ್ಡ್ ಆಫೀಸರ್(ಸಾಂಖ್ಯಿಕ) | 9 | 4 | 5 | |
| 21 | ಜಾನುವಾರು ಅಭಿವೃದ್ಧಿ ಅಧಿಕಾರಿ | 227 | 162 | 65 | |
| 22 | ಸಹಾಯಕ ಆಡಳಿತಾಧಿಕಾರಿಗಳು | 35 | 35 | 0 | |
| 23 | ಕೃಷಿ ಅಧಿಕಾರಿ | 1 | 0 | 1 | |
| 24 | ಸಹಾಯಕ ಅಭಿಯಂತರರು | 1 | 0 | 1 | |
| 25 | ಸಹಾಯಕ ಕೃಷಿ ಅಧಿಕಾರಿ | 7 | 0 | 7 | |

| | | | | | |
|---|---|---|---|---|---|
| | ಒಟ್ಟು= | **280** | **201** | **79** | |
| **ಸಿ–ಗುಂಪು** | | | | | |
| 26 | ಜಾನುವಾರು ಅಧಿಕಾರಿ | 500 | 395 | 105 | |
| 27 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 1825 | 889 | 936 | |
| 28 | ಪಶುವೈದ್ಯಕೀಯ ಪರೀಕ್ಷಕರು | 1847 | 1075 | 772 | |
| 29 | ಕಿರಿಯ ಪಶುವೈದ್ಯಕೀಯ ಪರೀಕ್ಷಕರು | 2144 | 1338 | 806 | |
| 30 | ಕೃಷಿ ಸಹಾಯಕರು /ಕ್ಷೇತ್ರ ಸಹಾಯಕರು | 22 | 0 | 22 | |
| 31 | ಕ್ಷೀರ ಮೇಲ್ವಿಚಾರಕರು / ವ್ಯವಸ್ಥಾಪಕರು(ಕ್ಷೀರ) | 1 | 0 | 1 | |
| 32 | ಲ್ಯಾಬ್ ಟೆಕ್ನೀಷಿಯನ್ | 30 | 0 | 30 | |
| 33 | ಎಕ್ಷರೇ ಟೆಕ್ನೀಷಿಯನ್ | 1 | 0 | 1 | |
| | ಒಟ್ಟು= | **6370** | **3697** | **2673** | |
| **ಆಡಳಿತ ವರ್ಗ** | | | | | |
| 34 | ಆಡಿಟ್ ಅಧೀಕ್ಷಕರು | 1 | 0 | 1 | |
| 35 | ಅಧೀಕ್ಷಕರು | 99 | 92 | 07 | |
| 36 | ಪ್ರಥಮ ದರ್ಜೆ ಸಹಾಯಕರು | 209 | 209 | 00 | |
| 37 | ದ್ವಿತೀಯ ದರ್ಜೆ ಸಹಾಯಕರು | 294 | 246 | 48 | |
| 38 | ಶೀಘ್ರಲಿಪಿಗಾರರು | 24 | 18 | 06 | |
| 39 | ಹಿರಿಯ ಬೆರಳಚ್ಚುಗಾರರು | 20 | 07 | 13 | |
| 40 | ಬೆರಳಚ್ಚುಗಾರರು | 88 | 20 | 68 | |
| 41 | ಹಿರಿಯ ವಾಹನಚಾಲಕರು | 59 | 28 | 31 | |
| 42 | ವಾಹನಚಾಲಕರು | 237 | 27 | 210 | |
| 43 | ಕಿರಿಯ ಸಾಂಖ್ಯಿಕ ಅಧಿಕಾರಿ (ಸಾಂಖ್ಯಿಕ ಪರೀಕ್ಷಕರು) | 6 | 1 | 5 | |
| 44 | ಸಹಾಯಕ ಸಾಂಖ್ಯಿಕ ಅಧಿಕಾರಿ | 17 | 13 | 4 | |
| 45 | ಪ್ರಚಾರ ಸಹಾಯಕರು | 1 | 0 | 1 | |
| 46 | ಮೆಕಾನಿಕ್ (ಹಿರಿಯ ಶ್ರೇಣಿ) | 2 | 0 | 2 | |
| 47 | ಹಿರಿಯ ಮೆಕಾನಿಕ್ | 2 | 0 | 2 | |
| 48 | ಮೆಕ್ಯಾನಿಕ್ (ಕಿರಿಯ ಶ್ರೇಣಿ) | 5 | 0 | 5 | |
| 49 | ಸಹಾಯಕ ಪಿಟ್ಟರ್ | 1 | 0 | 1 | |
| | ಒಟ್ಟು= | **1065** | **661** | **404** | |
| ಡಿ–ಗುಂಪು | | | | | |
| 50 | ಜಮೇದಾರ್ | 42 | 0 | 42 | |
| 51 | ಕುಕ್-ಗೆಸ್ಟ್ ಹೌಸ್ ಕೇರ್ ಟೇಕರ್ | 13 | 0 | 13 | |
| 52 | ವೆಟರಿನರಿ ಅಟೆಂಡೆಂಟ್ / ಗ್ರೂಪ್ ಡಿ | 7363 | 1845 | 5518 | |
| | ಒಟ್ಟು= | **7418** | **1845** | **5573** | |

| ಸಂಕ್ಷಿಪ್ತ | | | | | |
|---|---|---|---|---|---|
| ಕ್ರಸಂ. | ಗುಂಪು | ಮಂಜೂರು | ಭರ್ತಿ | ಖಾಲಿ | |
| 1 | ಎ–ಗುಂಪು | **3430** | **2269** | **1161** | ಗುತ್ತಿಗೆ ಆಧಾರದ ಮೇಲೆ 400 ಪಶುವೈದ್ಯಾಧಿಕಾರಿ ಹುದ್ದೆಗಳ ಭರ್ತಿಗಾಗಿ ಸರ್ಕಾರದಿಂದ ಅನುಮತಿ ನೀಡಿದ್ದು, 212 ಅಭ್ಯರ್ಥಿಗಳು ಆಯ್ಕೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| 2 | ಬಿ ಗುಂಪು | **280** | **201** | **79** | |
| 3 | ಸಿ-ಗುಂಪು | **6370** | **3697** | **2673** | |
| | ಸಿ-ಗುಂಪು (ಆಡಳಿತ ವರ್ಗ) | **1065** | **661** | **404** | ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರ 181 ಹಾಗೂ ಬೆರಳಚ್ಚುಗಾರರ 09 ಹುದ್ದೆಗಳಿಗೆ ಸೇವೆಯನ್ನು ಪಡೆಯಲಾಗಿದೆ. |
| 4 | ಡಿ–ಗುಂಪು | **7418** | **1844** | **5574** | ಹೊರಗುತ್ತಿಗೆ ಆಧಾರದ ಮೇಲೆ 2301 ಡಿ ದರ್ಜೆ ಹುದ್ದೆಗಳಿಗೆ ಸೇವೆಯನ್ನು ಪಡೆಯಲಾಗಿದೆ. |
| | ಒಟ್ಟು= | **18563** | **8672** | **9891** | |